## ಮಧ್ಯಂತರ ಅರ್ಜಿ – 7 ರ ಮೇಲೆ ಆದೇಶ

ಮೇಲ್ಮನವಿದಾರರ ಪರವಾಗಿ ದಿ.ಪ್ರ.ಸಂ. ಕ್ರಮಾದೇಶ 1 ನಿಯಮ 10(2) ರಡಿ ಸದರಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯ ಪ್ರಸ್ತಾಪಿತ ಎದುರುದಾರರನ್ನು ಮೇಲ್ಮನವಿಯಲ್ಲಿ 8 ನೇ ಎದುರುದಾರರಾಗಿ ಸೇರಿಸುವಂತೆ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಮೇಲ್ಮನವಿದಾರರು ತಮ್ಮ ಅರ್ಜಿಯ ಲಗತ್ತು ಪ್ರಮಾಣಪತ್ರದಲ್ಲಿ ಸದರಿ ಪ್ರಸ್ತಾಪಿತ ಎದುರುದಾರರು ಮಾರ್ಚ್ 2023 ರಲ್ಲಿ ದಾವಾಸ್ತಿಗೆ ಬಂದು ತನ್ನ ಕೃಷಿ ಸಾಗುವಳಿಗೆ ತೊಂದರೆ ಮಾಡಿದ್ದರಿಂದ ವಿಚಾರಿಸಿದಾಗ 4 ನೇ ಎದುರುದಾರರು ದಿನಾಂಕ: 25-01-2023 ರಂದು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆಂದು ತಿಳಿಸಿದ್ದು ಆ ಕಾರಣ ಮೇಲ್ಮನವಿಯ ನಿರ್ಣಯಕ್ಕೆ ಅವಶ್ಯಕ ಪಕ್ಷಗಾರರಾಗಿರುತ್ತಾರೆಂದು, ಆದ್ದರಿಂದ ಸದರಿಯವರನ್ನು 8 ನೇ ಎದುರುದಾರರನ್ನಾಗಿ ಸೇರಿಸಬೇಕೆಂದು ಕೋರಿರುತ್ತಾರೆ.

3. ಸದರಿ ಅರ್ಜಿಯ ನೋಟೀಸು ಜಾರಿಯಾಗಿದ್ದರೂ ಸಹ ಸದರಿ ಪ್ರಸ್ತಾಪಿತ ಎದುರುದಾರರು ಹಾಜರಾಗದೇ ಇದ್ದುದ್ದರಿಂದ ಅವರ ವಿರುದ್ಧ ಏಕಪಕ್ಷೀಯ ಆದೇಶವಿರುತ್ತದೆ.

4. ಮೇಲ್ಮನವಿದಾರರ ವಕೀಲರ ವಾದವನ್ನು ಆಲಿಸಲಾಯಿತು.

5. ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಕಂಡುಬಂದಿರುತ್ತವೆ:

1) ಸದರಿ ಮೇಲ್ಮನವಿದಾರರ ಅರ್ಜಿಯನ್ನು ಪುರಸ್ಕರಿಸಿ ಅರ್ಜಿಯಲ್ಲಿ ಕೋರಿದ 8 ನೇ ಪ್ರಸ್ತಾಪಿತ ಎದುರುದಾರರನ್ನು ಮೇಲ್ಮನವಿಯಲ್ಲಿ

8 ನೇ ಎದುರುದಾರರಾಗಿ ಸೇರ್ಪಡಿಸಲು ಸಮರ್ಥನೀಯವಾದ ಕಾರಣಗಳನ್ನು ನೀಡಿರುತ್ತಾರೆಯೇ?

2) ಆದೇಶವೇನು?

**7.** ಅರ್ಜಿಯ ಅಂಶಗಳನ್ನು ಮತ್ತು ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಿ, ಮೇಲ್ಮನವಿದಾರರ ವಕೀಲರ ವಾದವನ್ನು ಆಲಿಸಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ

1ನೇ ಅಂಶ : ಸಕರಾತ್ಮಕವಾಗಿ

2ನೇ ಅಂಶ : ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ

**ಕಾರಣಗಳು**

**8.** **1 ನೇ ಅಂಶಃ-** ವಿಚಾರಣಾ ನ್ಯಾಯಾಲಯದಲ್ಲಿ ವಾದಿಯು ಸಲ್ಲಿಸಿದ್ದ ಓ.ಎಸ್.ನಂ.494/2007 ರ ದಾವೆಯನ್ನು ದಿನಾಂಕಃ 13-09-2019 ರಂದು ಡಿಕ್ರಿಗೊಳಿಸಿ ನೀಡಿದ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

**9.** ಮೇಲ್ಮನವಿಯು ಜಾರಿಯಲ್ಲಿದ್ದ ಸಮಯದಲ್ಲಿ 4 ನೇ ಎದುರುದಾರರು ದಾವಾಸ್ತಿಯನ್ನು ಪ್ರಸ್ತಾಪಿತ ಎದುರುದಾರರಿಗೆ ಮಾರಾಟ ಮಾಡಲು ದಿನಾಂಕಃ 25-01-2023 ರಂದು ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆಂದು, ಆದ್ದರಿಂದ ಸದರಿಯವರನ್ನು ಮೇಲ್ಮನವಿಯಲ್ಲಿ ಎದುರುದಾರರನ್ನಾಗಿ ಸೇರ್ಪಡಿಸಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**10.** ಪ್ರಥಮವಾಗಿ ಈ ಅರ್ಜಿಯನ್ನು ಸಲ್ಲಿಸುವಾಗ ಕರಾರುಪತ್ರವಾಗಿರುತ್ತದೆಂದು ತಿಳಿಸಿದ್ದು ಆದರೆ ವಿಚಾರಣೆಗೆ ಬಾಕಿಯಿದ್ದ ಸಮಯದಲ್ಲಿ ದಿನಾಂಕಃ 15-06-2023 ರಂದು ಕರಾರುಪತ್ರ ಬರೆದುಕೊಟ್ಟಿರುತ್ತಾರೆಂದು, ಅದರ ನಕಲನ್ನು ಹಾಜರುಪಡಿಸಿರುತ್ತಾರೆ.

**11.** ಆದ್ದರಿಂದ ವಿವಾದಿತ ಅಂಶವನ್ನು ಅಂತಿಮವಾಗಿ ನಿರ್ಣಯಿಸಬೇಕಾಗಿದ್ದಲ್ಲಿ ಸದರಿ ಎದುರುದಾರರೊಂದಿಗೆ ಅರ್ಜಿಯ ಪ್ರಸ್ತಾಪಿತ ಎದುರುದಾರರಾ ಸಹ ಅವಶ್ಯಕ ಪಕ್ಷಗಾರರಾಗಿರುತ್ತಾರೆಂಬುದು ನ್ಯಾಯಾಲಯಕ್ಕೆ ಕಂಡುಬರುತ್ತದೆ.

12. ಅಲ್ಲದೇ ಎದುರುದಾರರಿಗೆ ನೋಟೀಸು ಜಾರಿಯಾಗಿದ್ದರೂ ಸಹ ಹಾಜರಾಗಿ ತಕರಾರು ಸಲ್ಲಿಸಿರುವುದಿಲ್ಲ. ಒಂದು ವೇಳೆ ಸದರಿ ಎದುರುದಾರರಿಗೆ ಯಾವುದೇ ಹಾನಿ ಅಥವಾ ನಷ್ಟವುಂಟಾಗಿದ್ದಲ್ಲಿ ಅದನ್ನು ತಕರಾರಿನಲ್ಲಿ ತಿಳಿಸಲು ಅವಕಾಶವಿರುತ್ತದೆ. ಅಲ್ಲದೇ ಸೂಕ್ತ ಪರಿಹಾರವನ್ನೂ ಸಹ ನೀಡಲು ನ್ಯಾಯಾಲಯಕ್ಕೆ ಅವಕಾಶವೂ ಸಹ ಇರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿ **1 ನೇ ಅಂಶವನ್ನು ಸಕರಾತ್ಮಕವಾಗಿ** ಉತ್ತರಿಸಲಾಗಿದೆ.

**13.** **2 ನೇ ಅಂಶಃ-**1 ನೇ ಅಂಶದಲ್ಲಿ ತಿಳಿಸಿದ ಕಾರಣಗಳ ಮೇರೆಗೆ ಈ ಕೆಳಕಂಡಂತೆಃ

## ಆದೇಶ

ಮೇಲ್ಮನವಿದಾರರ ಪರವಾಗಿ ದಿ.ಪ್ರ.ಸಂ. ಕ್ರಮಾದೇಶ 1 ನಿಯಮ 10(2) ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ-7 ನ್ನು ಪುರಸ್ಕರಿಸಲಾಗಿದೆ.

ಅರ್ಜಿಯ ಪ್ರಸ್ತಾಪಿತ ಎದುರುದಾರರನ್ನು ಮೇಲ್ಮನವಿಯಲ್ಲಿ 8 ನೇ ಎದುರುದಾರಾಗಿ ಸೇರ್ಪಡಿಸಲು ಅನುಮತಿಸಲಾಗಿದೆ.

ತಿದ್ದುಪಡಿಗಾಗಿ ದಿನಾಂಕಃ **11-03-2024** ರಂದು ಕರೆಯಲು ಆದೇಶಿಸಲಾಗಿದೆ.

**(ರಮೇಶ ದುರುಗಪ್ಪ ಏಕಬೋಟೆ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ